# ಲಕ್ಕಿ ಮೇನಿಯಾ

**ನಾವು ಮಾಡುವ ಕೆಲಸದ ಹಿಂದೆ ಶ್ರಮವಿದೆ, ತಕ್ಕ ಫಲವಿದೆ, ಉಡುಗೆ ತೊಡುಗೆ ಏನು ಮಾಡೀತು? ಎಂದು ಹುಬ್ಬೇರಿಸುವ, ಕೀಟಲೆ ಮಾಡುವ, ಅಯ್ಯೋ ಅರೆಹುಚ್ಚು ಎಂದು ಕನಿಕರಿಸಿ ಕುಹಕವಾಡುವ ಮಂದಿ ಇಲ್ಲದಿಲ್ಲ. ಲಕ್ಕಿ ಅಥವಾ ಅನ್ ಲಕ್ಕಿ ಎನ್ನುವುದು ಭ್ರಮೆ, ಮನೋವಿಕಾರ ಎಂದು ವೈಜ್ಞಾನಿಕವಾಗಿ ವಿಶ್ಲೇಷಿಸಿದರೂ ಒಮ್ಮೆ ತಲೆಯಲ್ಲಿ ಕೂತರೆ ಅಷ್ಟು ಬೇಗ ಹೊರಹೋಗದು.**

■ **ಕೆ.ವಿ. ರಾಜಲಕ್ಷ್ಮಿ**

ಲಕ್ಕಿ ಮೇನಿಯಾ...ಇದೇನು ಹುಚ್ಚು ಅಂದಿರಾ? ಸರಿಸುಮಾರು ಅದೇ! ನನ್ನ ಮಟ್ಟಿಗಂತೂ ನಿಜ. ಒಮ್ಮೆ ನಿಮ್ಮನ್ನು ನೀವು ಒಳಹೊಕ್ಕು ನೋಡಿಕೊಂಡರೆ ಅಲ್ಪ ಪ್ರಮಾಣದಲ್ಲಾದರೂ ಇರಲಿಕ್ಕೆ ಸಾಕು. ಇದು ತರ್ಕಾತೀತ ಎಂದೇ ನನ್ನ ಭಾವನೆ. ಇದಕ್ಕೆ ನನ್ನ ಬಳಿ ನಿದರ್ಶನಗಳು ಧಾರಾಳವಾಗಿ ಇವೆ.

***

ಬಹುಶಃ ನನಗೆ ನೆನಪಿರುವಂತೆ ಕಾಲೇಜಿನಲ್ಲಿ ಲಕ್ಕಿ ಎಂಬ ಪದದ ಚಟ ಆವರಿಸಿದ್ದು. ಶಾಲೆ ಮುಗಿದು ಕಾಲೇಜಿಗೆ ಕಾಲಿಡುತ್ತಲೇ ಎರಡು ಬಾಂಬೆ ಡ್ರೈಯಿಂಗ್ ಲಂಗಗಳು ಬಗಲಿಗೆ ಬಿತ್ತು. ಯುನಿಫಾರ್ಮ್ ರಗಳೆ ಇಲ್ಲದೆ ನಿತ್ಯವೂ ಕಲರ್ ಡ್ರೆಸ್ ಎಂಬ ಸಂತೋಷ! ಒಂದು ಹಸಿರು ಬಣ್ಣದ್ದು ಮತ್ತೊಂದು ಕೇಸರಿ ಬಣ್ಣದ್ದು. ಇಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲ. ಮನೆಯಲ್ಲಿ ತಂದದ್ದು ನಾವು ಉಸಿರೆತ್ತದೇ ತೊಡುತ್ತಿದ್ದ ಸಾಂಪ್ರದಾಯಿಕ ಕಾಲ. ಇವುಗಳ ಹಿಂದೆ ಒಂದು ನೈಲಾನ್ ಲಂಗದ ಬಟ್ಟೆ ಹಸಿರು ಹಳದಿ ಮಿಶ್ರಿತ ತಂದಾಗ ಅದು ಒಂಚೂರೂ ಚೆನ್ನಾಗಿಲ್ಲವೆಂದು, ಬೇಡವೆಂದು ಅದೆಷ್ಟು ಅತ್ತಿದ್ದೇನೋ! ಇದಕ್ಕೆ ಅಮ್ಮ ಸಂಪೂರ್ಣ ಕಿವುಡು! ಕೊನೆಗೂ ಲಂಗ ಹೊಲಿಸಿ ಕಾಲೇಜಿಗೆ ಅದೊಂದು ಗುರುವಾರ ತೊಟ್ಟೆ. ವಾರದ ಉಳಿದ ದಿನಗಳಲ್ಲಿ ಕಾಲೇಜಿನಿಂದ ವಾಪಸ್ ಮನೆಗೆ ಬರುವಾಗ ಬಸ್ ತೊಂದರೆ ಇಲ್ಲ. ಆದರೆ ಗುರುವಾರ ಬಸ್‌ನ ತಾಪತ್ರಯ, ನಿಗದಿತ ಬಸ್ ಬಿಟ್ಟರೆ ಮತ್ತೆ ಮೂರೂ ಗಂಟೆ ನಮ್ಮ ಮನೆಗೆ ಬಸ್ ಇಲ್ಲ. ಅಂದು ಅದೃಷ್ಟಕ್ಕೆ ಬಸ್ ಸಿಕ್ಕಿತ್ತು. ಅಷ್ಟೇ ಸಾಕಾಯ್ತು ನೋಡಿ! ಅದೇ ಲಂಗವನ್ನು ಪ್ರತಿ ಗುರುವಾರ ಹಾಕಿಕೊಳ್ಳುತ್ತಿದ್ದೆ, ಬಸ್ ಮಿಸ್ ಮಾಡಿದ ಪ್ರಸಂಗವೇ ಇರಲಿಲ್ಲ. ಹೀಗಾಗಿ ಇದು 'ಲಕ್ಕಿ ಡ್ರೆಸ್' ಎಂದು ಮಾತ್ರ ಅನ್ನಿಸಿಕೊಳ್ಳದೆ 'ಗುರುವಾರದ ಲಂಗ' ಎಂದು ಗೆಳತಿಯರಿಂದ ಚುಡಾಯಿಸಿಕೊಂಡಿತ್ತು!

